# 2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತದ ವತಿಯಿಂದ ಮಾವು ಬೆಳೆಗಾರರು ವಿವಿಧ ಪರಿಕರಗಳ ಸಹಾಯಧನ ಪಡೆಯುವ ಕಾರ್ಯಕ್ರಮಗಳ ಅನುಷ್ಠಾನ ಮಾರ್ಗಸೂಚಿ:

K.S.M.D&M.C.Ltd. Bhavan

## I. ಪೀಠಿಕೆ:

ಮಾವು ಬೆಳೆಗಾರರಿಗೆ ಕೊಯ್ಲು ಪೂರ್ವ ಮತ್ತು ಕೊಯ್ಲು ನಂತರ ಚಟುವಟಿಕೆಗಳಿಗೆ ಅವಶ್ಯವಿರುವ ಪರಿಕರಗಳಾದ ಅರ್ಕ ಸಕರಕಾ, ಹಣ್ಣು ಕಟಾವು ಸಲಕರಣೆ, ಮ್ಯಾಂಗೋ ಸ್ಪೆಷಲ್, ಸೀಲರ್ ಕಮ್ ಹೀಲರ್, ಪೊಟ್ಯಾಸ್ಸಿಯಂ ನೈಟ್ರೇಟ್, ಫ್ರೂಟ್ ಬ್ಯಾಗ್, ಸವರುವಿಕೆ ಉಪಕರಣ, ಕುಗ್ಗಿದ ಇಥಲಿನ್ ಡಬ್ಬಿ, ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ ಹಾಗೂ ಫೆರಮೋನ್ ಟ್ರ್ಯಾಪ್ಸ್ ಕಾರ್ಯಕ್ರಮಗಳಿಗೆ ಮಾವು ನಿಗಮದ ವತಿಯಿಂದ ಸಹಾಯಧನ ನೀಡಿ ಪ್ರೋತ್ಸಾಹಿಸಲು ಅನುಷ್ಠಾನ ಮಾರ್ಗಸೂಚಿಯನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

## II. ಫಲಾನುಭವಿಗಳ ಅರ್ಹತೆ:

1. ಫಲಾನುಭವಿಗಳು ಮಾವು ಬೆಳೆಯುವ ರೈತರಾಗಿರಬೇಕು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರ ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು. **ಜಮೀನು ಖಾತೆದಾರರು ಜೀವಂತವಿದ್ದಲ್ಲಿ ಇತರೆ ಕುಟುಂಬದ ಸದಸ್ಯರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.**
2. ಮಾವು ಬೆಳೆ ವಿಸ್ತೀರ್ಣ ಕನಿಷ್ಟ 0.20 ರಿಂದ ಗರಿಷ್ಟ 2.00 ಹೆ., ಹೊಂದಿರಬೇಕು.
3. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಮಾನ್ಯ ಮಾಡಲಾಗುವುದಿಲ್ಲ. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
4. ಫಲಾನುಭವಿ ಇದೇ ಕಾರ್ಯಕ್ರಮದಡಿ ರೈತರು ತೋಟಗಾರಿಕೆ ಇಲಾಖೆಯ/ಇತರೆ ಅಭಿವೃದ್ಧಿ ಇಲಾಖೆಗಳ ಯಾವುದೇ ಯೋಜನೆ ಅಡಿ ಸಹಾಯಧನ ಪಡೆದಿದ್ದಲ್ಲಿ, ಮತ್ತೊಮ್ಮೆ ಸದರಿ ಕಾರ್ಯಕ್ರಮದಡಿ ಮಾವು ನಿಗಮದಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
5. ಫಲಾನುಭವಿ ಅರ್ಜಿಯಲ್ಲಿ ಕೋರಿರುವ ಸಹಾಯಧನವನ್ನು ಘಟಕವಾರು ವಿವರಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಅಥವಾ ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕಿ ಸಹಾಯಧನವನ್ನು ವಿತರಿಸುವುದು.
6. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ)/ಮಾವು ಅಭಿವೃದ್ಧಿ ಕೇಂದ್ರ ರವರುಗಳು ಮಾವು ನಿಗಮದ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಪ್ರಚಾರ ಕೈಗೊಳ್ಳಲು ಕ್ರಮವಹಿಸುವುದು.
7. ರೈತ ಮಹಿಳೆಯರಿಗೆ ಆದ್ಯತೆ ನೀಡುವುದು ಹಾಗೂ ಸಣ್ಣ, ಅತೀ ಸಣ್ಣ ಮತ್ತು ಪ.ಜಾ/ಪ.ಪಂ, ಮತ್ತು ಇತರೆ ಎಲ್ಲಾ ವರ್ಗದವರು ಸಹಾಯಧನ ಪಡೆಯಲು ಅರ್ಹರಿರುತ್ತಾರೆ.
8. ಅನುಮೋದಿತ ಸಂಸ್ಥೆಗಳು, ಮಾದರಿ/ದರಗಳನ್ನು ಮಾತ್ರ ಸಹಾಯಧನಕ್ಕೆ ಪರಿಗಣಿಸಲಾಗುವುದು.

III. ಅರ್ಜಿ ಸಲ್ಲಿಸುವ ವಿಧಾನ:

1. ಮಾವು ನಿಗಮದ ವತಿಯಿಂದ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅನುಮೋದಿತವಾಗಿರುವ ಸಂಸ್ಥೆಗಳಿಂದ/ಸರ್ಕಾರಿ ಸಂಸ್ಥೆಗಳಿಂದ ಅನುಮೋದಿತ ಪರಿಕರಗಳಿಗೆ ಸಂಸ್ಥೆವಾರು ನಿಗದಿಪಡಿಸಲಾಗಿರುವ ಎಲ್-1 ದರಗಳನ್ವಯ ಖರೀದಿಸತಕ್ಕದ್ದು.
2. ಅರ್ಜಿ ನಮೂನೆ ಅನುಮೋದಿತ ಸರಬರಾಜುದಾರರ ವಿವರಗಳ ಕುರಿತಂತೆ ಜಿಲ್ಲಾ/ ತಾಲ್ಲೂಕು/ಹೋಬಳಿ ಹಂತದಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೆಚ್ಚಿನ ಪ್ರಚಾರ ಕೈಗೊಳ್ಳುವುದು.
3. ಸಹಾಯಧನ ಪಡೆಯಲು ನಿಗದಿಪಡಿಸಲಾದ ಅರ್ಜಿ ನಮೂನೆಯೊಂದಿಗೆ ಅಗತ್ಯ ದಾಖಲಾತಿಗಳನ್ನು ಹಾಗೂ ಫಲಾನುಭವಿಯ ಇಚ್ಛಿಸಿದ ಅನುಮೋದಿತ ಸಂಸ್ಥೆ ಹಾಗೂ ಪರಿಕರಗಳಿಗೆ ಪ್ರಮಾಣ/ಮಾದರಿ ಅನುಸಾರ ರೈತರ ವಂತಿಕೆ ಮೊತ್ತವನ್ನು ಸಂಗ್ರಹಿಸಿ ವಿವರಗಳನ್ನು ನಮೂದಿಸಿ ಸಂಬಂಧಪಟ್ಟ ತಾಲ್ಲೂಕು ಹಿಸತೋನಿ (ಜಿಪಂ) ರವರು ಹಾಗೂ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರುಗಳು ದೃಢೀಕರಿಸಿ ಸರಬರಾಜು ಬೇಡಿಕೆ (Supply Indent) ನೀಡಲು ಕೋರಿ ಪ್ರಸ್ತಾವನೆಯನ್ನು ಮಾವು ನಿಗಮ ಕೇಂದ್ರ ಕಚೇರಿಗೆ ಬೆಂಗಳೂರಿಗೆ ಸಲ್ಲಿಸುವುದು
4. **ಯಾವುದೇ ಕಾರಣಕ್ಕೂ ಜಿಲ್ಲಾ/ತಾಲ್ಲೂಕು ವತಿಯಿಂದ ನೇರವಾಗಿ ಸರಬರಾಜು ಬೇಡಿಕೆ (Supply Indent) ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಸಲ್ಲಿಸಬಾರದು.**
5. **ಸರಬರಾಜು ಬೇಡಿಕೆ (Supply Indent) ಅನ್ನು ಮಾವು ನಿಗಮಕ್ಕೆ ಸಲ್ಲಿಸದೇ ನೇರವಾಗಿ ಅನುಮೋದಿತ ಸಂಸ್ಥೆಗಳಿಂದ ಖರೀದಿಸಿದ ಪರಿಕರಗಳಿಗೆ ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.**
6. ಸಲ್ಲಿಸಲಾಗುವ ಪ್ರಸ್ತಾವನೆಯ ದಾಖಲಾತಿಗಳನ್ನು ಮಾರ್ಗಸೂಚಿಯನ್ವಯ ಪರೀಶಿಲಿಸಿ ಅರ್ಹ ಫಲಾನುಭವಿಗಳ ವಿವರಗಳೊಂದಿಗೆ ಮಾವು ನಿಗಮದ ವತಿಯಿಂದ ಫಲಾನುಭವಿಗಳು ಸೂಚಿಸಲಾದ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಜಿಲ್ಲಾ/ತಾಲ್ಲೂಕು ಸರಬರಾಜು ಬೇಡಿಕೆ (Purchase order) ನ್ನು ನಿಗಮದ ವತಿಯಿಂದ ಸಲ್ಲಿಸಲಾಗುವುದು.
7. ಸರಬರಾಜು ಬೇಡಿಕೆ (Supply Indent) ಅನುಸಾರ, ಸರಬರಾಜು ಸಂಸ್ಥೆಯ e-way bill, Delivery note/challan ಹಾಗೂ Invoice ನೊಂದಿಗೆ ಸಂಬಂಧಪಟ್ಟ ತಾಲ್ಲೂಕು ಹಿಸತೋನಿ (ಜಿಪಂ) ರವರು ತಾಲ್ಲೂಕುವಾರು ಫಲಾನುಭವಿಗಳಿಗೆ ಇಲಾಖಾ ಅಧಿಕಾರಿಗಳ ಮಾರ್ಗದರ್ಶನದಲ್ಲಿ ವಿತರಿಸಿ ಸಹಿ ಪಡೆದು ಹಾಗೂ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರು ದೃಢೀಕರಿಸಿ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ/ಫಲಾನುಭವಿಗಳಿಗೆ ಮಾವು ನಿಗಮದ ವಂತಿಕೆ / ಸಹಾಯಧನ ಮೊತ್ತವನ್ನು ಪಾವತಿಸಲು ಮಂಜೂರಾತಿ ಕೋರಿ ಸಲ್ಲಿಸುವುದು.
8. ಫಲಾನುಭವಿವಾರು Indent ಅನುಸಾರ ವಿತರಣೆ ಜವಾಬ್ದಾರಿಯು ಸರಬರಾಜು ಸಂಸ್ಥೆಯದ್ದಾಗಿರುತ್ತದೆ.
9. **ರೈತರು/ಫಲಾನುಭವಿಗಳು ಬೇಡಿಕೆಯನ್ನು ಕನಿಷ್ಟ 15 ದಿನ ಮುಂಗಡವಾಗಿ ಸಲ್ಲಿಸಬೇಕು.**

IV. ಸಲ್ಲಿಸಬೇಕಾದ ದಾಖಲಾತಿಗಳು :

1. ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ. ಹಾಗೂ ಮೊಬೈಲ್ ದೂರವಾಣಿ ಸಂಖ್ಯೆ ವಿವರಗಳು
2. 2019-20ನೇ ಸಾಲಿನ ಪಹಣಿ/RTC – ಪ್ರತಿಯನ್ನು ಸಲ್ಲಿಸುವುದು.

3. ಪಹಣಿಯಲ್ಲಿ ಮಾವು ಬೆಳೆ, ವಿಸ್ತೀರ್ಣ ನಮೂದಿಸಿರಬೇಕು ಪಹಣಿಯಲ್ಲಿ ನಮೂದಿಲ್ಲದಿದ್ದಲ್ಲಿ, ಬೆಳೆ ದೃಢೀಕರಣ ಪತ್ರ ಸಲ್ಲಿಸುವುದು.
4. ಆಧಾರ್ ಕಾರ್ಡ್ /ಮತದಾರರ ಗುರುತಿನ ಚೀಟಿ ಕಡ್ಡಾಯವಾಗಿ ಸಲ್ಲಿಸುವುದು.
5. ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ ವರ್ಗ ಆಗಿದ್ದಲ್ಲಿ ಮಾತ್ರ)
6. ಬ್ಯಾಂಕ್ ಖಾತೆಯ ವಿವರಗಳು (IFSC ಕೊಡ್‌ನೊಂದಿಗೆ) ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು (ಸಹಾಯಧನ ಮೊತ್ತ ಫಲಾನುಭವಿಗೆ ಪಾವತಿಸಬೇಕಾದಲ್ಲಿ).

## I) ಸಹಾಯಧನದ ವಿವರ:

| ಕ್ರ.ಸಂ. | ಕಾರ್ಯಕ್ರಮ | ಸಹಾಯಧನದ ವಿವರ |
|---|---|---|
| 01 | **ಅರ್ಕ ಸಕರಕಾ** (**Arka Sakarakha**) | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 20 ಕೆ.ಜಿ. ಗಳಂತೆ ಗರಿಷ್ಠ 2.00 ಹೆಕ್ಟೇರ್ ವಿಸ್ತೀರ್ಣಕ್ಕೆ 40 ಕೆ ಜಿ. ಗೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• IIHR ಹೆಸರಘಟ್ಟ, ಬೆಂಗಳೂರು ರವರಿಂದ ಖರೀದಿಸಿದ ದರಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು. |
| 02 | **ಮಾನವ ಚಾಲಿತ** (**Manual operated**) **ಹಣ್ಣು ಕಟಾವು ಸಲಕರಣೆ** (**Mango Fruit harvester**) | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಗರಿಷ್ಠ 02 ಸಂಖ್ಯೆಯ ಕಟಾವು ಉಪಕರಣಗಳನ್ನು ಗರಿಷ್ಟ 0.10 – 1.00 ಹೆಕ್ಟೇರ್ ವಿಸ್ತೀರ್ಣಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• ಮಾವು ನಿಗಮದ ವತಿಯಿಂದ ಅನುಮೋದಿತ ಮಾದರಿ, ದರ ಮತ್ತು ಸಂಸ್ಥೆಗಳ ಅಥವಾ IIHR ಹೆಸರಘಟ್ಟ, ಬೆಂಗಳೂರು ರವರ ವತಿಯಿಂದ ಖರೀದಿಸಿದ ಹಣ್ಣು ಕಟಾವು ಸಲಕರಣೆಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು. |
| 03 | **ಫೆರಮೋನ್ ಟ್ರ್ಯಾಪ್ಸ್** (**Phermone traps**) | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 20 ರಂತೆ ಗರಿಷ್ಠ 10.00 ಹೆಕ್ಟೇರ್ ವಿಸ್ತೀರ್ಣಕ್ಕೆ 200 ಸಂಖ್ಯೆಗೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• IIHR ಹೆಸರಘಟ್ಟ, ಬೆಂಗಳೂರು/ಮಾವು ಅಭಿವೃದ್ಧಿ ಕೇಂದ್ರ, ಹೊಗಳಗೆರೆ/ಉತ್ಕೃಷ್ಟ ಕೇಂದ್ರ, (COE), ಹೊಗಳಗೆರೆ ಕೇಂದ್ರಗಳಲ್ಲಿ ಖರೀದಿಸಿದ ದರಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು.<br>• ಸಹಾಯಧನಕ್ಕೆ ಪ್ರತಿ **ಫೆರಮೋನ್ 01 ಟ್ರ್ಯಾಪ್ಸ್** + **03 ಲೂರ್ಸ್** ಒಟ್ಟಾರೆ ವೆಚ್ಚ ರೂ: 45/-ಗಳಂತೆ ಪರಿಗಣಿಸಲಾಗುವುದು. |
| 04 | **ಮ್ಯಾಂಗೋ ಸ್ಪೆಷಲ್** (**Mango Special**) | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 20 ಕೆ.ಜಿ. ಗಳಂತೆ ಗರಿಷ್ಠ 4.00 ಹೆಕ್ಟೇರ್ ವಿಸ್ತೀರ್ಣಕ್ಕೆ 80 ಕೆ.ಜಿ, ಗೆ |

| | | |
|---|---|---|
| | | ಸಹಾಯಧನವನ್ನು ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• IIHR ಹೆಸರಘಟ್ಟ, ಬೆಂಗಳೂರು/ ಮಾವು ಉತ್ಕೃಷ್ಟ ಕೇಂದ್ರ, (COE), ಹೊಗಳಗೆರೆ, ಶ್ರೀನಿವಾಸಪುರ ತಾಲ್ಲೂಕು ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖರೀದಿಸಿದ ದರಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು.<br>ಅಥವಾ ಮಾವು ಉತ್ಕೃಷ್ಟ ಕೇಂದ್ರ, (COE), ಹೊಗಳಗೆರೆ ಕೇಂದ್ರದ ದರ ಪ್ರತಿ ಕೆ.ಜಿ. ಗೆ ರೂ.140/- ಮೊತ್ತವನ್ನು ಸಹಾಯಧನಕ್ಕೆ ಪರಿಗಣಿಸಲಾಗುವುದು. |
| 05 | **ಸವರುವಿಕೆ ಉಪಕರಣ (Pruning equipment)** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ 0.10-0.40 ಹೆಕ್ಟೇರೆಗೆ 01 ಮಾದರಿಯಂತೆ ರಂತೆ ಮತ್ತು ಗರಿಷ್ಠ 0.41-1.00 ಹೆ., ವಿಸ್ತೀರ್ಣಕ್ಕೆ ಗರಿಷ್ಠ 02 ಸಂಖ್ಯೆಯ ಸವರುವಿಕೆ ಉಪಕರಣಗಳಿಗೆ ಅಥವಾ ಒಟ್ಟಾರೆ ಗರಿಷ್ಠ ರೂ.1100/-ಗಳಿಗೆ ಸಹಾಯಧನ ಪ್ರತಿ ಫಲಾನುಭವಿಗೆ ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು. |
| 06 | **$KNO_3$ (Potassium Nitrate)** | • ಪ್ರತಿ ಕೆ.ಜಿ. ಗರಿಷ್ಟ ದರ ರೂ.115/- ಪ್ರತಿ ಕೆ.ಜಿ. ಮಿತಿಗೊಳಿಸಲಾಗಿದೆ.<br>• ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 25 ಕೆ.ಜಿ ಗಳಂತೆ ಗರಿಷ್ಠ 2.00 ಹೆ., ವಿಸ್ತೀರ್ಣಕ್ಕೆ 50 ಕೆ ಜಿ. ಗೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು. |
| 07 | **ಹಣ್ಣುಗಳ ಗುಣಮಟ್ಟ ಕಾಪಾಡಲು ಪ್ರೂಟ್ ಬ್ಯಾಗ್ (Fruit Bag) ಕವಚಗಳ ಖರೀದಿಗೆ ಸಹಾಯಧನ** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಗರಿಷ್ಠ 01 ಹೆಕ್ಟೇರ್‌ಗೆ ವಿಸ್ತೀರ್ಣಕ್ಕೆ ಗರಿಷ್ಟ ರೂ.30,000/- ಗಳ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ಮತ್ತು ಇತರೆ ವರ್ಗಕ್ಕೆ ವರ್ಗಕ್ಕೆ ಶೇ.60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• ಫಲಾನುಭವಿಯ ಜಮೀನಿನಲ್ಲಿ ಪ್ರೂಟ್ ಬಾಕ್ಸ್ ಅಳವಡಿಸಿರುವ ಛಾಯಚಿತ್ರ ಕಡ್ಡಾಯವಾಗಿ ಸಲ್ಲಿಸುವುದು. |
| 08 | **ಸೀಲರ್ ಕಮ್ ಹೀಲರ್ (Sealer cum Healer)** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 25 ಕೆ.ಜಿ., ಗಳಂತೆ ಗರಿಷ್ಠ 2.00 ಹೆಕ್ಟೇರ್ ವಿಸ್ತೀರ್ಣಕ್ಕೆ 50 ಕೆ.ಜಿ. ಗೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• IIHR ಹೆಸರಘಟ್ಟ, ಬೆಂಗಳೂರು ಸಂಸ್ಥೆಯ ಖರೀದಿಸಿದ |

| | | |
|---|---|---|
| | | ದರಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು. |
| 09 | **ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ (Low cost ripening chamber)** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ 0.20 ರಿಂದ 2.00 ಹೆಕ್ಟೇರ್ ವಿಸ್ತೀರ್ಣಕ್ಕೆ 01 ಸಂಖ್ಯೆ ಘಟಕಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಘಟಕ ವೆಚ್ಚ ರೂ **6490.00.** ಗಳಿಗೆ ಪ.ಜಾ/ಪ.ಪಂ ವರ್ಗಕ್ಕೆ ಹಾಗೂ ಇತರೆ ವರ್ಗಕ್ಕೆ-60% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು.<br>• ಪ್ರತಿ **ಫೆರಮೋನ್ 01 ಟ್ರ್ಯಾಪ್ಸ್ + 03 ಲೂರ್ಸ್** ಒಟ್ಟಾರೆ ವೆಚ್ಚ ರೂ: 46/-ಗಳಂತೆ ಪರಿಗಣಿಸಲಾಗುವುದು. |
| 10 | **ಕುಗ್ಗಿದ ಇಥೆಲಿನ್ ಅನಿಲ ಡಬ್ಬಿ (Compressed ethylene gas can)** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಪ್ರತಿ ಹೆಕ್ಟೇರ್‌ಗೆ 10 ಸಂಖ್ಯೆ ಕ್ಯಾನ್‌ಗಳಂತೆ ಗರಿಷ್ಠ 2.00 ಹೆಕ್ಟೇರ್ ವಿಸ್ತೀರ್ಣಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ಘಟಕ ವೆಚ್ಚ ರೂ **118.00.** ಗಳಿಗೆ ಪ.ಜಾ/ಪ.ಪಂ ವರ್ಗಕ್ಕೆ ಹಾಗೂ ಇತರೆ ವರ್ಗಕ್ಕೆ-90% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು. |
| 11 | **ಇಥೆಲಿನ್ ಸ್ಯಾಷೆ (Ethylene ripener sachet)** | • ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಗರಿಷ್ಠ 100 ಸಂಖ್ಯೆ **ಇಥೆಲಿನ್ ಸ್ಯಾಷೆ** ಸಹಾಯಧನವನ್ನು ಮಿತಿಗೊಳಿಸಲಾಗಿದೆ.<br>• ವೆಚ್ಚ ರೂ 10/ಸ್ಯಾಷೆ ಗಳಂತೆ ಪ.ಜಾ/ಪ.ಪಂ ವರ್ಗಕ್ಕೆ ಹಾಗೂ ಇತರೆ ವರ್ಗಕ್ಕೆ- 100% ರಂತೆ ಸಹಾಯಧನಕ್ಕೆ ಪರಿಗಣಿಸಲಾಗುವುದು. |

- ಫಲಾನುಭವಿ ಅರ್ಜಿಯಲ್ಲಿ ಕೋರಿರುವ ಸಹಾಯಧನವನ್ನು ಘಟಕವಾರು ವಿವರಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಅಥವಾ ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕಿ ಸಹಾಯಧನವನ್ನು ವಿತರಿಸುವುದು.
- ಪರಿಕರಗಳ ಕ್ರಮ ಸಂಖ್ಯೆ:02, 03, 07, 09 ಮತ್ತು 10 ಗಳನ್ನು ನಿಗಮದ ವತಿಯಿಂದ ಅನುಮೋದಿತ ಸಂಸ್ಥೆಗಳಿಂದ ಪಡೆಯುವುದು.
- ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಮಾವು ಬೆಳೆ ಕನಿಷ್ಠ ವಿಸ್ತೀರ್ಣ 0.20 ಹೆಕ್ಟೇರ್‌ನಿಂದ ಪರಿಕರವಾರು ನಿಗಧಿಪಡಿಸಲಾಗಿರುವ ಗರಿಷ್ಠ ವಿಸ್ತೀರ್ಣಕ್ಕೆ ಅನ್ವಯಿಸುತ್ತದೆ.
- ಮೇಲೆ ವಿವರಿಸಿದಂತೆ ಪರಿಕರಗಳನ್ನು ಅನುಮೋದಿತ ಸಂಸ್ಥೆ/ಸೂಚಿಸಲಾದ ಅಧೀಕೃತ ಸಂಸ್ಥೆಗಳ ವತಿಯಿಂದ ಖರೀದಿಸಿದ ದರಗಳಿಗೆ ಮಾತ್ರ ಸಹಾಯಧನಕ್ಕೆ ಪರಿಗಣಿಸಲಾಗುವುದು.

ಸಂ:ಕರಾಮಾಅ&ಮಾನಿನಿ.ವ್ಯನಿ.ಸತೋನಿ2.29.2019-20.

ವ್ಯವಸ್ಥಾಪಕ ನಿರ್ದೇಶಕರು
ಮಾವು ಅಭಿವೃದ್ಧಿ ನಿಗಮ, ಬೆಂ

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ
2019-20 ನೇ ಸಾಲಿನ ವಿವಿಧ ಪರಿಕರಗಳ ಖರೀದಿಸಿದ ಫಲಾನುಭವಿಗಳು
ಸಹಾಯಧನ ಪಡೆಯಲು ಸಲ್ಲಿಸಬೇಕಾದ ವಿವರಗಳು

# ಅರ್ಜಿ ನಮೂನೆ-ಎ

| ಕ್ರ.ಸಂ | ಮಾಹಿತಿಯ ವಿವರ | |
|---|---|---|
| 1. | ರೈತರ ಹೆಸರು | |
| 2. | ತಂದೆಯ ಹೆಸರು, ಪೂರ್ಣ ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ | |
| 3. | ವರ್ಗ | |
| 4. | ಸರ್ವೆ ನಂ. | |
| 5. | ಮಾವು ಬೆಳೆ ವಿಸ್ತೀರ್ಣ (ಹೆ.,) | |
| | ತಳಿಗಳು | |
| 6. | ಮಾವು ಬೆಳೆ ಇರುವ ಗ್ರಾಮ, | |
| | ಹೋಬಳಿ, | |
| | ತಾಲ್ಲೂಕು | |
| 7. | ಲಗತ್ತಿಸಬೇಕಾದ ಅಗತ್ಯ ದಾಖಲಾತಿಗಳು | ಪಹಣಿ, ಬೆಳೆ ದೃಢೀಕರಣ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್/ಗುರುತಿನ ಚೀಟಿ, ಬ್ಯಾಂಕ್ ಖಾತೆ ಜೆರಾಕ್ಸ್ ಪ್ರತಿ |
| 8. | ಖರೀದಿಸಿಲಾದ ಪರಿಕರ ಫೆರಮೋನ್ ಟ್ರಾಪ್ಸ್ / ಮ್ಯಾಂಗೋ ಸ್ಪೇಷಲ್/ ಆರ್ಕಾ ಸಕಾರಕ/ ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ/ ಹಣ್ಣಿನ ಕವಚ/ಇಥಿಲಿನ್ ಕ್ಯಾನ್/ಪೋಚ್, ಏಕ ಬಳಕೆಯ ಕ್ರೇಟ್‌ಗಳು ಇತರೆ. | |
| 9. | ಖರೀದಿಸಿದ ಪರಿಕರಗಳ ವಿವರ /ಸರಬರಾಜುದಾರ ಸಂಸ್ಥೆ ಹೆಸರು ಮಾದರಿ | |
| 10. | ಒಟ್ಟು ಖರೀದಿಸಿದ ಸಂಖ್ಯೆ | |
| 11. | ಪಾವತಿಸಲಾದ ರೈತರ ವಂತಿಕೆ ಮೊತ್ತ ರೂ. (ಶೇ.40/10%). | |
| 12. | ಪಾವತಿಸಬೇಕಾದ ಸಹಾಯಧನ ವಿವರ | ರೈತರ ಖಾತೆಗೆ/ಸರಬರಾಜುದಾರರಿಗೆ |
| 13. | ಫಲಾನುಭವಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ, IFSC Code ಮತ್ತು ಬ್ಯಾಂಕಿನ ಅಂಚೆ ವಿಳಾಸ (ರೈತರ ಖಾತೆಗೆ ಪಾವತಿಸಬೇಕಾದಲ್ಲಿ) | |
| 14. | ನಿಗಮದ ವಂತಿಕೆ ಶೇ. (ಶೇ.60/90%). ಸಹಾಯಧನ ಕೋರಿರುವ ಮೊತ್ತ | |
| 15. | Indent/Po No. ವಿವರಗಳು. | |

ರೈತರ ಸಹಿ
ಪೂರ್ಣ ಹೆಸರಿನೊಂದಿಗೆ

ಪು.ತಿ.ನೋ.

## ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ 2018–19 ನೇ ಸಾಲಿನ ವಿವಿಧ ಪರಿಕರಗಳ ಖರೀದಿಸಿದ ಸಹಾಯಧನ ಪಡೆಯಲು ಪರಿಶೀಲನಾ ದೃಢೀಕರಣ

________________ ತಾಲ್ಲೂಕಿನ __________ ಹೋಬಳಿ__________ ಗ್ರಾಮದ ವಾಸಿಯಾದ ಶ್ರೀ ________________ ರವರು __________ ಗ್ರಾಮದ ಸರ್ವೆ ನಂಬರ್ ನಲ್ಲಿ ____________ ವಿಸ್ತೀರ್ಣದ ಮಾವಿನ ತೋಟ ಹೊಂದಿದ್ದು, 2018–19 ನೇ ಸಾಲಿನ ಮಾವು ನಿಗಮದ ವತಿಯಿಂದ ____ ಸಂಖ್ಯೆಯ__________ ಪರಿಕರಗಳನ್ನು ರೈತರ ವಂತಿಕೆ ಶೇ.(40/10 ರಷ್ಟು) ರೂ. _____ ಪಾವತಿಸಿ ಖರೀದಿಸಿಲಾಗಿದ್ದು,

ಸದರಿ ಫಲಾನುಭವಿಗಳ ನಿಗಮದ ವಂತಿಕೆ ಮೊತ್ತವನ್ನು ಶೇ.(60/90 ರಷ್ಟು) ರೂ.________ (ಪದಗಳಲ್ಲಿ ____________________) ಮಾವು ನಿಗಮದ ವತಿಯಿಂದ ___________ (ಮಾವು ಬೆಳೆಗಾರರಿಗೆ ಖಾತೆಗೆ/ಸರಬರಾಜುದಾರ ಸಂಸ್ಥೆಗೆ) ಸಂದಾಯ ಮಾಡಲು ಈ ಮೂಲಕ ದೃಢೀಕರಿಸಿದೆ.

**ಫಲಾನುಭವಿಯ ಸಹಿ**

ದಿನಾಂಕ:

ಸ್ಥಳ :

ಸಹಾಯಕ ತೋಟಗಾರಿಕೆ ಅಧಿಕಾರಿ
_________ ರೈತ ಸಂಪರ್ಕ ಕೇಂದ್ರ,

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಪಂ), _________ ತಾಲ್ಲೂಕು

# ಅನುಬಂಧ-1

## 2019-20 ನೇ ಸಾಲಿನ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ ಪರಿಕರಗಳಾದ ಫೆರಮೋನ್ ಟ್ರಾಪ್ಸ್ / ಮ್ಯಾಂಗೋ ಸ್ಪೇಷಲ್/ ಆರ್ಕಾ ಸಕಾರಕ/ ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ/ ಹಣ್ಣಿನ ಕವಚ/ಇಥಿಲಿನ್ ಕ್ಯಾನ್/ಪೋಚ್, ಏಕ ಬಳಕೆಯ ಕ್ರೇಟ್‌ಗಳು ಇತರೆ ಒದಗಿಸಲು/ಸಹಾಯಧನ ಪಡೆಯಲು

## Indent Request/Purchase order

**ಕಛೇರಿ ಉಪಯೋಗಕ್ಕಾಗಿ ಮಾತ್ರ**

| ಕ್ರ.ಸಂ. | ಫಲಾನುಭವಿಯ ಹೆಸರು & ವಿಳಾಸ | ಸರ್ವೆ ನಂ. | ವಿಸ್ತೀರ್ಣ (ಹೆ) | ಖರೀದಿಸಲಾಗುವ ಪ್ರಮಾಣ ಸಂಖ್ಯೆ | ಸರಬರಾಜು ಸಂಸ್ಥೆ | ಪರಿಕರ |
|---|---|---|---|---|---|---|
| 01 | | | | | | |
| 02 | | | | | | |
| 03 | | | | | | |

ಸಹಿ

ತೋಉನಿ/ಹಿಸತೋನಿ (ಜಿಪಂ)

# ಅನುಬಂಧ-2

## 2019-20 ನೇ ಸಾಲಿನ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ ಪರಿಕರಗಳಾದ ಫೆರಮೋನ್ ಟ್ರಾಪ್ಸ್ / ಮ್ಯಾಂಗೋ ಸ್ಪೇಷಲ್/ ಆರ್ಕಾ ಸಕಾರಕ/ ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ/ ಹಣ್ಣಿನ ಕವಚ/ಇಥಿಲಿನ್ ಕ್ಯಾನ್/ಪೋಚ್, ಏಕ ಬಳಕೆಯ ಕ್ರೇಟ್‌ಗಳು ಇತರೆ ಒದಗಿಸಲು/ಸಹಾಯಧನ ಪಡೆಯಲು

## ಘೋಷ್ವಾರೆ

**(ಪ್ರತಿ ಭಾರಿಯು ಪ್ರತ್ಯೇಕವಾಗಿ ನಮೂದಿಸಿ ಅರ್ಜಿ ನಮೂನೆಯೊಂದಿಗೆ ಸಲ್ಲಿಸತಕ್ಕದ್ದು)**

**ಕಛೇರಿ ಉಪಯೋಗಕ್ಕಾಗಿ ಮಾತ್ರ**

| | | |
|---|---|---|
| Indent/Po No. | | |
| ತಾಲ್ಲೂಕು | | |
| ಜಿಲ್ಲೆ | | |
| ಒಟ್ಟು ಫಲಾನುಭವಿಗಳ ಸಂಖ್ಯೆ | | |
| ಒಟ್ಟು ಅವಶ್ಯವಿರುವ ಕಾರ್ಟುನ್ ಬಾಕ್ಸ್‌ಗಳ ಸಂಖ್ಯೆ | | |
| ಸರಬರಾಜು ಸಂಸ್ಥೆ1 | ಫಲಾನುಭವಿಗಳ ಸಂಖ್ಯೆ | ಪ್ರಮಾಣ ಸಂಖ್ಯೆ |
| | | |
| ಸರಬರಾಜು ಸಂಸ್ಥೆ1 | ಫಲಾನುಭವಿಗಳ ಸಂಖ್ಯೆ | ಪ್ರಮಾಣ ಸಂಖ್ಯೆ |
| | | |

**ಸಹಿ**

**ತೋಉನಿ/ಹಿಸತೋನಿ (ಜಿಪಂ)**